ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 31-12-1993.

# *ಹೊಸ ವರ್ಷದಲ್ಲಿ ಸದಾ ಉತ್ಸಾಹ-ಉಲ್ಲಾಸದಲ್ಲಿ ಹಾರುತ್ತಾ ಇರಬೇಕು ಹಾಗೂ ಸರ್ವರಪ್ರತಿ ಮಹಾದಾನಿ, ವರದಾನಿಯಾಗಿದ್ದು ವ್ಯರ್ಥವನ್ನು ಸಮಾಪ್ತಿ ಮಾಡಬೇಕು*

(नये वर्ष में सदा उमंग-उत्साह में उड़ना और सर्व के प्रति महादानी, वरदानी बन व्यर्थ को समाप्त करना)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಮತ್ತು ಆ ಸಂಬಂಧಗಳ ಕರ್ತವ್ಯವನ್ನು ಬ್ರಾಹ್ಮಣ ಜೀವನದಲ್ಲಿ ನಿಭಾಯಿಸಿದಾಗ ಆತ್ಮಿಕ ಸ್ಥಿತಿ ಸಹಜವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಹೊಸ ಜೀವನವನ್ನು ಕೊಟ್ಟು ಹಾರುವ ಕಲೆಯಲ್ಲಿ ಹಾರಿಸುವ ನವಯುಗ ರಚಯಿತ ಶಿವತಂದೆ ತನ್ನ ಆಧಾರ ಮೂರ್ತಿ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ನವಯುಗ ಹೊಸಸೃಷ್ಟಿಯ ರಚಯಿತ ಬಾಪ್‌ದಾದಾರವರು ತನ್ನ ನವಯುಗ ಆಧಾರಮೂರ್ತಿ ಮಕ್ಕಳನ್ನು ನೋಡುತ್ತಿದ್ದಾರೆ. ಬಾಪ್‌ದಾದಾರವರ ಜೊತೆ-ಜೊತೆ ತಾವೆಲ್ಲಾ ಮಕ್ಕಳು ಸದಾ ಸಹಯೋಗಿ ಆಗಿದ್ದೀರಿ ಆದ್ದರಿಂದ ತಾವೇ ಆಧಾರಮೂರ್ತಿ ಆಗಿದ್ದೀರಿ. ಪ್ರಪಂಚದ ಲೆಕ್ಕದಿಂದ ಇಂದಿನ ದಿನ ವರ್ಷದ ಸಂಗಮವಾಗಿದೆ. ಹಳೆಯ ವರ್ಷ ಹೋಗುತ್ತಿದೆ

ಮತ್ತು ಹೊಸ ವರ್ಷ ಬರುತ್ತಿದೆ. ಇದು ವರ್ಷದ ಸಂಗಮದ ದಿನ ಮತ್ತು ತಾವು ಬೇಹದ್ದಿನ ಸಂಗಮಯುಗದಲ್ಲಿ ಕುಳಿತಿದ್ದೀರಿ. ತಾವೆಲ್ಲರೂ ಹೊಸ ವರ್ಷದ ಜೊತೆಜೊತೆಗೆ ನವಯುಗದ ಪ್ರಯುಕ್ತ ಸರ್ವರಿಗೂ ಶುಭಾಷಯಗಳನ್ನು ಕೊಡುತ್ತೀರಿ. ಒಂದು ದಿನದ ಶುಭಾಷಯಗಳಲ್ಲ ಆದರೆ ನವಯುಗದ ಅನೇಕ ಜನ್ಮಗಳ ಶುಭಾಷಯಗಳನ್ನು ಕೊಡುತ್ತೀರಿ. ಈ ಸಮಯದಲ್ಲಿ ನಾವು ಬ್ರಾಹ್ಮಣ ಆತ್ಮರ ಹೊಸ ಜೀವನವಾಗಿದೆ ಎಂದು ಈ ಸಂಗಮದಲ್ಲಿ ಬಹಳ ಚೆನ್ನಾಗಿ ಅನುಭವ ಮಾಡುತ್ತೀರಿ. ಹೊಸ ಜೀವನ, ಬ್ರಾಹ್ಮಣ ಸಂಸಾರವೇ ಹೊಸದಾಗಿದೆ. ಅಮೃತವೇಳೆಯಿಂದ ನೋಡಿದರೂ ಹೊಸ ಹಾಡು, ಹೊಸ ಪ್ರೀತಿಯಿದೆ. ಹಳೆಯ ಪ್ರಪಂಚದ ದಿನಚರಿ ಹಾಗೂ ಹೊಸ ಜೀವನದ ಬ್ರಾಹ್ಮಣ ಜೀವನದ ದಿನಚರಿಯಲ್ಲಿ ಎಷ್ಟೊಂದು ಅಂತರವಿದೆ ಎಲ್ಲವೂ ಹೊಸದಾಗಿದೆ ಸ್ಮೃತಿ, ವೃತ್ತಿ, ದೃಷ್ಟಿ, ಎಲ್ಲವೂ ಬದಲಾಗಿಬಿಟ್ಟಿದೆಯಲ್ಲವೇ. ಹಾಗೆಯೇ ಹೊಸ ಜೀವನ ಎಷ್ಟೊಂದು ಪ್ರಿಯವೆನಿಸುತ್ತದೆ! ಹಾಗೆನೋಡಿದರೆ ಹೊಸವಸ್ತು ಎಲ್ಲರಿಗೂ ಪ್ರಿಯವೆನಿಸುತ್ತದೆ. ಹಳೆಯ ವಸ್ತುವನ್ನು ಬಿಡಬೇಕು ಅನಿಸುತ್ತದೆ ಮತ್ತು ಹೊಸ ವಸ್ತುವನ್ನು ತೆಗೆದುಕೊಳ್ಳುವ ಇಚ್ಛೆಯುಂಟಾಗುತ್ತದೆ. ಅಂದಾಗ ಈ ಸಮಯದ ಈ ಚಿಕ್ಕದಾದ ಹೊಸ ಸಂಸಾರವಿದೆ. ಸಂಸಾರ(ಜಗತ್ತು)ವೂ ಹೊಸದು ಹಾಗೂ ಸಂಸ್ಕಾರವೂ ಹೊಸದಾಗಿದೆ ಆದ್ದರಿಂದ ಪ್ರಪಂಚದವರೂ ಹೊಸ ವರ್ಷವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ.

ಆಚರಿಸುವುದರ ಅರ್ಥವಾಗಿದೆ ಉತ್ಸಾಹ ಉಲ್ಲಾಸದಲ್ಲಿ ಬರುವುದು. ಉತ್ಸಾಹವಾಗುತ್ತದೆ ಆದ್ದರಿಂದ ಆಚರಿಸುವ ದಿನವನ್ನು ಉತ್ಸವ ಎಂದು ಹೇಳುತ್ತಾರೆ. ಉತ್ಸವದಲ್ಲಿಯೇ ಒಬ್ಬರಿನ್ನೊಬ್ಬರಿಗೆ ಶುಭಾಷಯಗಳನ್ನು ಕೊಡುತ್ತಾರೆ ಅಥವಾ ಗ್ರೀಟಿಂಗ್ಸ್ ಕೊಡುತ್ತಾರೆ. ತಾವು ಬ್ರಾಹ್ಮಣ ಆತ್ಮರಿಗಾಗಿ ಪ್ರತೀ ದಿನವೂ ಉತ್ಸವವಾಗಿದೆ. ಸದಾ ಉತ್ಸವ ಅಂದರೆ ಉತ್ಸಾಹ ಉಲ್ಲಾಸದಲ್ಲಿ ಇರುತ್ತೀರಿ. ಇದೇ ಬ್ರಾಹ್ಮಣ ಜೀವನವಾಗಿದೆ. ಪ್ರಪಂಚದವರ ಅನುಸಾರ ವಿಶೇಷ ದಿನವನ್ನು ಆಚರಿಸುತ್ತೀರಿ. ಇಂದು ಆಚರಿಸುವುದಕ್ಕಾಗಿ ಒಟ್ಟಿಗೆ ಸೇರಿದ್ದೀರಲ್ಲವೆ. ಆದರೆ ತಮ್ಮ ನವಯುಗ ಹೊಸ ಜೀವನದ ಉತ್ಸಾಹ ಉಲ್ಲಾಸವು ಸದಾ ಕಾಲ ಇರುತ್ತದೆ. ಒಂದನೇ ದಿನಾಂಕವಾದ ಕೂಡಲೆ ಉತ್ಸಾಹ ಉಲ್ಲಾಸವು ಸಮಾಪ್ತಿಯಾಯಿತು, ಒಂದು ತಿಂಗಳಾಯಿತೆಂದರೆ ಮತ್ತಷ್ಟು ಸಮಾಪ್ತಿಯಾಗಿಬಿಡುತ್ತದೆ- ಈ ರೀತಿಯಾಗಬಾರದು. ಪ್ರತೀ ದಿನ ಉತ್ಸಾಹ ಉಲ್ಲಾಸವು ಹೆಚ್ಚಾಗುತ್ತಿರಬೇಕೇ ಹೊರತು ಕಡಿಮೆಯಾಗಬಾರದು ಹೀಗಿದ್ದೀರಲ್ಲವೆ? ತಮ್ಮ- ತಮ್ಮ ಸ್ಥಾನಗಳಲ್ಲಿ ಹೋದ ನಂತರ ಉತ್ಸಾಹವು ಕಡಿಮೆಯಾಗಿಬಿಡುತ್ತದೆಯೇ? ಪ್ರತೀ ಗಳಿಗೆಯೂ ಉತ್ಸಾಹ ಉಲ್ಲಾಸ ಇರಬೇಕು ಏಕೆಂದರೆ ತಾವು ಬ್ರಾಹ್ಮಣ ಆತ್ಮರ ಹಾರುವ ಕಲೆಯ ರೆಕ್ಕೆಗಳೇ ಉತ್ಸಾಹ ಉಲ್ಲಾಸವಾಗಿದೆ. ಈ ರೆಕ್ಕೆಗಳಿಂದ ಸದಾ ಹಾರುತ್ತಾ ಇರುತ್ತೀರಿ. ಒಂದುವೇಳೆ ಕಾರ್ಯಾರ್ಥವಾಗಿ ಕರ್ಮದಲ್ಲಿ ಬಂದರೂ ಸಹ ಹಾರುವ ಕಲೆಯ ಸ್ಥಿತಿಯಿಂದ ಕರ್ಮಯೋಗಿಯಾಗಿ ಕರ್ಮದಲ್ಲಿ ಬರುತ್ತೀರಿ. ಹಾಗಾದರೆ ಹಾರುವ ಕಲೆಯವರಾಗಿದ್ದೀರಿ ಅಲ್ಲವೆ. ರೆಕ್ಕೆಗಳಿಲ್ಲದೆ ಹಾರಲು ಸಾಧ್ಯವಿಲ್ಲ. ಹಾರುವ ಕಲೆಯ ಉತ್ಸಾಹ ಉಲ್ಲಾಸದ ರೆಕ್ಕೆಗಳು ಸದಾ ಜೊತೆಯಿರುವುದು ಬ್ರಾಹ್ಮಣ ಆತ್ಮರಿಗಾಗಿ ಅತಿದೊಡ್ಡ ಶಕ್ತಿಯಾಗಿದೆ. ನೀರಸ ಜೀವನವಲ್ಲ. *ಪ್ರಪಂಚದವರಂತು ಹೇಳುವರು- ಏನು ಮಾಡುವುದು ಪ್ರಾಪ್ತಿಯೇ ಇಲ್ಲ. ಬೇಸರವಾಗಿದೆ. ಅಪ್ರಾಪ್ತಿಯೇ ಇದೆ ಮತ್ತು ತಾವೇನು ಹೇಳುವಿರಿ- ಉತ್ಸಾಹ ಉಲ್ಲಾಸದ ಪ್ರಾಪ್ತಿಯಿದ್ದೇ ಇದೆ ಎಂದಿಗೂ ಹೃದಯ ವಿಧೀರ್ಣರಾಗಲು(ಬಲಹೀನ) ಸಾಧ್ಯವಿಲ್ಲ. ಸದಾ ದಿಲ್ ಖುಷ್. ಎಂತಹ ಕಷ್ಟದ ಮಾತೇ ಇರಲಿ ಆದರೆ ಉತ್ಸಾಹ ಉಲ್ಲಾಸವು ಕಷ್ಟವನ್ನು ಸಹಜ

ಮಾಡಿಬಿಡುತ್ತದೆ. ಉತ್ಸಾಹವು ಬಿರುಗಾಳಿಯನ್ನೂ ಬಳುವಳಿಯನ್ನಾಗಿ ಮಾಡಿಬಿಡುತ್ತದೆ. ಪರ್ವತವನ್ನೂ ಸಾಸಿವೆಯಂತೆ ಅಲ್ಲ ಆದರೆ ಹತ್ತಿಯ ಸಮಾನ ಮಾಡಿಬಿಡುತ್ತದೆ. ಉತ್ಸಾಹವು ಎಂತಹ ಪರೀಕ್ಷೆ ಅಥವಾ ಸಮಸ್ಯೆಗಳನ್ನೂ ಮನೋರಂಜನೆಯಂತೆ ಅನುಭವ ಮಾಡಿಸುತ್ತದೆ.* ಆದ್ದರಿಂದ ಉತ್ಸಾಹ ಉಲ್ಲಾಸದಲ್ಲಿ ಇರುವಂತಹ ನವಯುಗದ ಆಧಾರಮೂರ್ತಿ ನವ ಜೀವನವಿರುವ ಬ್ರಾಹ್ಮಣ ಆತ್ಮರಾಗಿದ್ದೀರಿ. ತಮ್ಮನ್ನು ಏನೆಂದು ತಿಳಿದುಕೊಂಡಿದ್ದೀರಿ ಇದನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಕೇವಲ ತಿಳಿದಿದ್ದೀರಾ ಏನು ಹೇಳುವಿರಿ? ಅವಶ್ಯವಾಗಿ ತಿಳಿದಿದ್ದೇವೆ ಹಾಗೂ ಒಪ್ಪಿಕೊಳ್ಳುತ್ತೇವೆ ಹಾಗೂ ಅದರಂತೆಯೇ ನಡೆಯುತ್ತಿದ್ದೇವೆ. ಸದಾ ಈ ಉತ್ಸಾಹವಿರುತ್ತದೆಯೇ- ಕಲ್ಪದ ಮೊದಲೂ ನಾವೇ ಇದ್ದೆವು. ಈಗಲೂ ಇದ್ದೇವೆ ಹಾಗೂ ಅನೇಕ ಬಾರಿ ನಾವೇ ಆಗುತ್ತೇವೆ. ಅಂದಮೇಲೆ ಅವಿನಾಶಿ ಉತ್ಸಾಹವಾಯಿತಲ್ಲವೆ. ಇದ್ದೆವು. ಇದ್ದೇವೆ ಹಾಗೂ ಸದಾ ಹಾಗೆಯೇ ಇರುತ್ತೇವೆ ಅಂದರೆ ಮೂರೂ ಕಾಲಗಳ ಭೂತ, ವರ್ತಮಾನ ಹಾಗೂ ಭವಿಷ್ಯದ್ದಾಯಿತು. ಅಂದಮೆಲೆ ಅವಿನಾಶಿಯಾಯಿತಲ್ಲವೆ, ಬಾಪ್‌ದಾದಾರವರು ಅವಿನಾಶಿ ಉತ್ಸಾಹ ಉಲ್ಲಾಸದಲ್ಲಿರುವ ಆತ್ಮರು ನಂಬರ್‌ವಾರ್ ಇದ್ದಾರೆಯೇ ಅಥವಾ ನಂಬರ್‌ವನ್ ಇದ್ದಾರೆಯೇ? ಎಂದು ನೋಡುತ್ತಿದ್ದರು. ನಿಶ್ಚಯಬುದ್ಧಿ ವಿಜಯಿ ಆದಮೇಲೆ ಅವಶ್ಯವಾಗಿ ನಂಬರ್‌ವನ್ ಆಗುವರಲ್ಲವೆ. ನಂಬರ್‌ವಾರ್ ಆಗುವುದಿಲ್ಲ.

ಅಂದಮೇಲೆ ಸದಾ ನವ ಜೀವನದ ಈ ಉತ್ಸಾಹದಲ್ಲಿ ಹಾರುತ್ತಾ ಸಾಗಿರಿ ಏಕೆಂದರೆ ತಾವು ಆಧಾರ ಮೂರ್ತಿಯರಾಗಿದ್ದೀರಿ. **ಕೇವಲ ತಮ್ಮ ಜೀವನಕ್ಕಾಗಿ ಆಧಾರವಲ್ಲ ಆದರೆ ವಿಶ್ವದ ಸರ್ವಾತ್ಮರ ಆಧಾರಮೂರ್ತಿಯಾಗಿದ್ದೀರಿ. ತಮ್ಮ ಶ್ರೇಷ್ಠ ವೃತ್ತಿಯಿಂದ ವಿಶ್ವದ ವಾತಾವರಣವು ಪರಿವರ್ತನೆಯಾಗುತ್ತಿದೆ. ತಮ್ಮ ಪವಿತ್ರ ದೃಷ್ಟಿಯಿಂದ ವಿಶ್ವದ ಆತ್ಮರು ಹಾಗೂ ಪ್ರಕೃತಿ- ಎರಡೂ ಪವಿತ್ರವಾಗುತ್ತಿದೆ. ತಮ್ಮ ದೃಷ್ಟಿಯಿಂದ ಸೃಷ್ಟಿಯೇ ಬದಲಾಗುತ್ತಿದೆ. ತಮ್ಮ ಶ್ರೇಷ್ಠ ಕರ್ಮಗಳಿಂದ ಶ್ರೇಷ್ಠಾಚಾರಿ ಪ್ರಪಂಚವಾಗುತ್ತಿದೆ. ಅಂದಮೇಲೆ ಎಷ್ಟು ದೊಡ್ಡ ಜವಾಬ್ದಾರರಾಗಿದ್ದೀರಿ! ವಿಶ್ವದ ಜವಾಬ್ದಾರಿಯ ಕಿರೀಟವನ್ನು ಧರಿಸಿದ್ದೀರಲ್ಲವೇ? ಅಥವಾ ಕೆಲವೊಮ್ಮೆ ಹೊರೆಯೆನಿಸಿದಾಗ ಇಳಿಸಿಬಿಡುತ್ತೀರಾ?** ಏನು **ಮಾಡುವಿರಿ? ಯಾರು ಡಬಲ್ ಲೈಟ್ ಆಗಿರುತ್ತಾರೆಯೋ ಅವರಿಗೆ ಈ ಜವಾಬ್ದಾರಿಯ ಕಿರೀಟವೂ ಸಹ ಸದಾ ಹಗುರವಾಗಿ ಅನುಭವವಾಗುವುದು, ಹೊರೆಯೆನಿಸುವುದಿಲ್ಲ. ಈ ಸಮಯದ ಕಿರೀಟಧಾರಿಯು ಭವಿಷ್ಯದ ಕಿರೀಟಧಾರಿ ಆಗುತ್ತಾರೆ.** ಅಂದಮೇಲೆ ಹೊಸ ವರ್ಷದಲ್ಲಿ ಏನು ಮಾಡುವಿರಿ? ಅವ್ಯಕ್ತ ವರ್ಷವನ್ನೂ ಆಚರಿಸಿದಿರಿ ಅಂದರೆ ಫರಿಶ್ತೆಯಾಗಿಬಿಟ್ಟಿದ್ದೀರಾ ಅಥವಾ ಈಗ ಆಗಬೇಕಾಗಿದೆಯೇ? ಫರಿಶ್ತೆಯರು ಏನು ಮಾಡುತ್ತಾರೆ?

ಅವ್ಯಕ್ತದ ಅರ್ಥವೇ ಫರಿಶ್ತೆ ಎಂದಾಗಿದೆ. ಈ ವರ್ಷವು ಪೂರ್ಣವಾಗುತ್ತಿದಂತೆಯೇ ಫರಿಶ್ತೆಯಾಗಿದ್ದೀರಾ ಅಥವಾ ಇಲ್ಲವೋ? ಅವ್ಯಕ್ತ ವರ್ಷವನ್ನು ಇನೂ ಹೆಚ್ಚು ಸಮಯ ಮಾಡುವುದೇ? ಎರಡು ವರ್ಷಗಳನ್ನಾಗಿ ಮಾಡುವುದೇ? ಈಗ ಇನ್ನೂ ವೃದ್ಧಿ ಹೊಂದಬೇಕಲ್ಲವೆ. ಅವ್ಯಕ್ತ ವರ್ಷವನ್ನಾಚರಿಸಿದಿರಿ, ಈಗ ಫರಿಶ್ತೆಯಾಗಿ ಏನು ಮಾಡುವಿರಿ?

**ಸದಾ ಪ್ರತಿನಿತ್ಯ, ಪ್ರತೀ ಸಮಯದಲ್ಲಿ ಮಹಾದಾನಿ ಮತ್ತು ವರದಾನಿ ಆಗಬೇಕಾಗಿದೆ. ಹಾಗಾದರೆ ಈ ವರ್ಷ ಮಹಾದಾನಿ-ವರದಾನಿ ವರ್ಷವನ್ನಾಗಿ ಆಚರಿಸಿರಿ. ಸಂಬಂಧ-ಸಂಪರ್ಕದಲ್ಲಿ ಯಾರೆಲ್ಲರೂ ಬರುತ್ತಾರೆಯೋ ಅವರಿಗೆ ಮಹಾದಾನಿಯಾಗಿ ಯಾವುದಾದರೊಂದು ಶಕ್ತಿಯ, ಜ್ಞಾನದ, ಗುಣದಾನ ಮಾಡಲೇಬೇಕು. ಮೂರೂ ಖಜಾನೆಗಳು**

ಎಷ್ಟೊಂದು ಸಂಪನ್ನವಾಗಿಬಿಟ್ಟಿದೆ! ಜ್ಞಾನದ ಖಜಾನೆಯೂ ಸಂಪನ್ನವಾಗಿದೆಯೇ ಅಥವಾ ಸ್ವಲ್ಪ ಕಡಿಮೆಯಿದೆಯೇ? ಮಾಸ್ಟರ್ ಜ್ಞಾನಪೂರ್ಣರಾಗಿದ್ದೀರಲ್ಲವೆ ಅಂದಮೇಲೆ ಜ್ಞಾನದ ಖಜಾನೆಯೂ ಇದೆ, ಶಕ್ತಿಗಳ ಖಜಾನೆಯೂ ಇದೆ ಹಾಗೂ ಗುಣಗಳ ಖಜಾನೆಯೂ ಇದೆ. ಮೂರರಲ್ಲಿಯೂ ಸಂಪನ್ನರಾಗಿದ್ದೀರಾ ಅಥವಾ ಒಂದರಲ್ಲಿ ಸಂಪನ್ನರಾಗಿ, ಇನ್ನೊಂದರಲ್ಲಿ ಆಗಿಲ್ಲವೇ? ವರ್ತಮಾನ ಸಮಯದಲ್ಲಿ ಆತ್ಮರಿಗೆ ಮೂರರ ಅವಶ್ಯಕತೆಯೂ ಬಹಳಷ್ಟಿದೆ. ಇಡೀ ದಿನದಲ್ಲಿ ಏನಾದರೊಂದು ಜ್ಞಾನದಾನವನ್ನಾದರೂ ಮಾಡಿರಿ, ಶಕ್ತಿಗಳ ಅಥವಾ ಗುಣಗಳ ದಾನ ಕೊಡಲೇಬೇಕು. ಮಹಾದಾನಿ ಆತ್ಮರ ಯಾವುದೊಂದು ದಿನವೂ ದಾನ ಕೊಡದೆ ಇರುವುದೇ ಇಲ್ಲ. ವರ್ಷ ಪೂರ್ಣವಾಯಿತು ಮತ್ತು ನಮಗೆ ಅವಕಾಶವೇ ಸಿಗಲಿಲ್ಲ ಎಂದು ಹೇಳುವಂತಾಗಬಾರದು. ಅವಕಾಶ ಪಡೆಯುವುದು ತಮ್ಮ ಮೇಲೆ ಆಧಾರಿತವಾಗಿದೆಯೇ ಅಥವಾ ಅವಕಾಶ ಕೊಡುವವರು ಕೊಟ್ಟಾಗ ತೆಗೆದುಕೊಳ್ಳುವಿರಾ ಅಥವಾ ಸ್ವಯಂ ತಾವೇ ಅವಕಾಶವನ್ನು ಕಲ್ಪಿಸಿಕೊಳ್ಳುವುದು ಬರುತ್ತದೆಯೇ? ಅಥವಾ ಯಾರಾದರೂ ಅವಕಾಶ ಕೊಟ್ಟರೆ ತೆಗೆದುಕೊಳ್ಳುವುದು ಬರುತ್ತದೆಯೇ? ಯಾರೂ ಅವಕಾಶ ಕೊಡದಿದ್ದರೆ ಏನು ಮಾಡುವಿರಿ? ನೋಡುತ್ತಾ, ಚಿಂತಿಸುತ್ತಾ ಇರುತ್ತೀರಾ? ಇಡೀ ದಿನದಲ್ಲಿ ಭಲೆ ಬ್ರಾಹ್ಮಣ ಆತ್ಮರಾಗಿರಬಹುದು ಅಥವಾ ಅಜ್ಞಾನಿ ಆತ್ಮರ ಸಂಬಂಧ ಸಂಪರ್ಕದಲ್ಲಿ ಬರುತ್ತಿರಲ್ಲವೆ, ಆಗ ಏನಾದರೊಂದು ದಾನ ಅರ್ಥಾತ್ ಸಹಯೋಗ ಕೊಡಿ. ದಾನ ಶಬ್ಧದ ಆತ್ಮಿಕ ಅರ್ಥವೇ ಸಹಯೋಗ ಕೊಡುವುದಾಗಿದೆ. ಅಂದಮೇಲೆ ಪ್ರತಿನಿತ್ಯ ಮಹಾದಾನಿ ಅಥವಾ ವರದಾನಿಯಾಗಿ ವರದಾನವನ್ನು ಹೇಗೆ ಕೊಡುವಿರಿ? ವರದಾನ ಕೊಡುವ ವಿಧಿಯೇನಾಗಿದೆ? ತಮ್ಮ ಜಡಚಿತ್ರವಂತೂ ಈಗಿನವರೆಗೂ ವರದಾನ ಕೊಡುತ್ತಿದೆ ಅಂದಮೇಲೆ ಅದರ ವಿಧಿಯಾಗಿದೆ- ಯಾವುದೇ ಆತ್ಮನು ತಮ್ಮ ಸಂಬಂಧ-ಸಂಪರ್ಕದಲ್ಲಿ ಬರುತ್ತಾರೆಂದರೆ, ತಮ್ಮ ಸ್ಥಿತಿಯ ವಾಯುಮಂಡಲದ ಮೂಲಕ ಹಾಗೂ ತಮ್ಮ ವೃತ್ತಿಯ ಪ್ರಕಂಪನಗಳ ಮೂಲಕ ಅವರಿಗೆ ಸಹಯೋಗ ಕೊಡುವುದೇ ವರದಾನ ಕೊಡುವುದಾಗಿದೆ. ಎಂತಹ ಆತ್ಮನೇ ಆಗಿರಲಿ, ಗ್ಲಾನಿ ಮಾಡುವ ಆತ್ಮನಾಗಿರಲಿ ಅಥವಾ ನಿಂದನೆ ಮಾಡುವವರೇ ಆಗಿರಲಿ ಆದರೆ ತಮ್ಮ ಶುಭ ಭಾವನೆ, ಶುಭ ಕಾಮನೆಯ ಮೂಲಕ, ವೃತ್ತಿ- ಸ್ಥಿತಿಯ ಮೂಲಕ ಆ ಆತ್ಮರಿಗೂ ಗುಣ ದಾನ ಅಥವಾ ಸಹನಶೀಲತೆಯ ಶಕ್ತಿಯ ವರದಾನ ಕೊಡಿ. ಒಂದುವೇಳೆ ಯಾರೇ? 'ಕ್ರೋಧಾಗ್ನಿಯಲ್ಲಿ ಸುಡುತ್ತಿರುವವರೇ ತಮ್ಮ ಮುಂದೆ ಬಂದರೂ ಸಹ, ಬೆಂಕಿಯಲ್ಲಿ ಎಣ್ಣೆ ಹಾಕುವಿರಾ ಅಥವ ಜಲವನ್ನು ಹಾಕುವಿರಾ? ಜಲವನ್ನು ಹಾಕುವಿರಲ್ಲವೆ ಅಥವಾ ಸ್ವಲ್ಪ ಎಣ್ಣೆಯನ್ನೂ ಸಿಂಪಡಿಸುತ್ತೀರಾ? ಒಂದುವೇಳೆ ಕ್ರೋಧಿಯ ಮುಂದೆ ತಮ್ಮ ಬಾಯಿಂದ ಕೋಪಿಸಿಕೊಳ್ಳುವುದಿಲ್ಲ. ಮುಖದಿಂದಂತೂ ಶಾಂತವಾಗಿರುತ್ತೀರಿ ಆದರೆ ಕಣ್ಣುಗಳಿಂದ, ಚಹರೆಯಿಂದ ಕ್ರೋಧದ ಭಾವನೆಯನ್ನು ವ್ಯಕ್ತ ಪಡಿಸಿದರೂ(ಆಲೋಚನಾ ಸ್ಥಾಯಿಯಲ್ಲಿಯೂ ಇರಬಾರದು) ಎಣ್ಣೆಯನ್ನು ಸಿಂಪಡಿಸಿದಂತೆ ಆಗುತ್ತದೆ. ಕ್ರೋಧಿಯು ಪರವಶನಾಗಿದ್ದಾನೆ. ದಯೆಯ ಶೀತಲ ಜಲದ ಮೂಲಕ ವರದಾನ ಕೊಡುವಂತಹ ವರದಾನಿ ಆಗಿದ್ದೀರಾ? ಅಥವಾ ಯಾವ ಸಮಯದಲ್ಲಿ ಅವಶ್ಯಕತೆಯಿದೆಯೋ ಆ ಸಮಯದಲ್ಲಿ ಸಹನೆ ಶಕ್ತಿಯ ಬಾಣವನ್ನು ಉಪಯೋಗಿಸುವುದಿಲ್ಲವೇ? ಒಂದುವೇಳೆ ಸಮಯಕ್ಕೆ ಯಾವುದೇ ಅಮೂಲ್ಯವಾದ ವಸ್ತುವು ಕಾರ್ಯದಲ್ಲಿ ಉಪಯೋಗಿಸದಿದ್ದರೆ, ಅದನ್ನು ಅಮೂಲ್ಯವೆಂದು ಹೇಳುತ್ತಾರೆಯೇ? ಅಮೂಲ್ಯವೆಂದರೆ ಸಮಯಕ್ಕೆ ಅಮೂಲ್ಯವಾದ ಕಾರ್ಯದಲ್ಲಿ ಉಪಯೋಗಿಸುವುದು. ಅಂದಮೇಲೆ ಈ ವರ್ಷದಲ್ಲಿ ಏನು ಮಾಡುವಿರಿ? ಮಹಾದಾನಿ, ವರದಾನಿ ಆಗಿರಿ. ಚೈತನ್ಯದಲ್ಲಿ ಸಂಸ್ಕಾರವನ್ನು ತುಂಬಿಕೊಂಡರೆ, ಜಡ ಚಿತ್ರಗಳ ಮೂಲಕವೂ ವರದಾನಿ ಮೂರ್ತಿ

**ಆಗುತ್ತೀರಿ. ಸಂಸ್ಕಾರವನ್ನಂತೂ ಈಗಲೇ ತುಂಬಿಕೊಳ್ಳಬೇಕಲ್ಲವೆ** ಅಥವಾ ಯಾವ ಸಮಯದಲ್ಲಿ ಮೂರ್ತಿಯಾಗುವಿರೋ ಆ ಸಮಯದಲ್ಲಿ ತುಂಬಿಕೊಳ್ಳುವಿರೇ?

**ಮಹಾದಾನಿ -ವರದಾನಿ ಮೂರ್ತಿ ಆಗುವುದರಿಂದ ವ್ಯರ್ಥವು ತಾನಾಗಿಯೇ ಸಮಾಪ್ತಿಯಾಗಿಬಿಡುವುದು. ಏಕೆಂದರೆ ಯಾರು ಮಹಾದಾನಿ ಆಗಿದ್ದಾರೆ. ವರದಾನಿ ಆಗಿದ್ದಾರೆಯೋ ಅವರು ಅನ್ಯರಿಗೂ ಕೊಡುವಂತಹ ದಾತಾನಾಗಿರುತ್ತಾರೆ. ಅಂದಮೇಲೆ ದಾತಾ ಎಂದರೆ ಅರ್ಥವೇ ಇದಾಗಿದೆ- ಸಮರ್ಥ. ಹೀಗಾದಾಗಲೇ ಕೊಡಬಹುದು. ಹಾಗಾದರೆ ಎಲ್ಲಿ ಸಮರ್ಥವಿದೆಯೋ ಅಲ್ಲಿ ಸ್ವತಹವಾಗಿಯೇ ವ್ಯರ್ಥವು ಸಮಾಪ್ತಿಯಾಗಿಬಿಡುತ್ತದೆ. ಸಮರ್ಥ ಸ್ಥಿತಿಯಾಗಿದೆ-** ಸ್ವಿಚ್ ಆನ್ ಆಗಿರುವುದು. ಹೇಗೆ ಈ ಸ್ಥೂಲ ಲೈಟಿನ ಸ್ವಿಚ್ ಆನ್ ಮಾಡುವುದು ಅರ್ಥಾತ್ ಅಂಧಕಾರವನ್ನು ಸಮಾಪ್ತಿ ಮಾಡುವುದಾಗಿದೆ. ಅದೇರೀತಿ ಸಮರ್ಥ ಸ್ಥಿತಿ ಎಂದರೆ ಸ್ವಿಚ್ ಆನ್ ಮಾಡುವುದು. ಹಾಗಾದರೆ ಸ್ವಿಚ್ ಸರಿಯಾಗಿದೆ ಅಲ್ಲವೆ ಅಥವಾ ಕೆಲವೊಮ್ಮೆ ಸರಿಯಾಗಿರುತ್ತದೆ. ಕೆಲವೊಮ್ಮೆ ಸಡಿಲವಾಗಿರುತ್ತದೆಯೋ ಅಥವಾ ಫ್ಯೂಸ್ ಹೊರಟುಹೋಗುತ್ತದೆಯೋ? ಆನ್ ಮಾಡುವುದಂತು ಬರುತ್ತದೆಯಲ್ಲವೆ. ಇತ್ತೀಚೆಗಂತು ಚಿಕ್ಕ-ಚಿಕ್ಕ ಮಕ್ಕಳು ಸಹ ಸ್ವಿಚ್ ಆನ್ ಮಾಡುವುದರಲ್ಲಿ ಬುದ್ಧಿವಂತರಾಗಿದ್ದಾರೆ. ಟಿ.ವಿ..ಯ ಸ್ವಿಚ್ ಆನ್ ಮಾಡಿಬಿಡುತ್ತಾರಲ್ಲವೆ. ಸ್ವಿಚ್ ಆನ್ ಆಗುವುದರಿಂದ ಒಂದೊಂದು ವ್ಯರ್ಥ ಸಂಕಲ್ಪವನ್ನು ಸಮಾಪ್ತಿ ಮಾಡುವ ಪರಿಶ್ರಮದಿಂದ ಮುಕ್ತರಾಗಿಬಿಡುತ್ತೀರಿ. ಅವ್ಯಕ್ತಫರಿಶ್ತೆಗಳ ಶ್ರೇಷ್ಠ ಕಾರ್ಯವೇ ಇದಾಗಿದೆ. ಮತ್ತೇನು ನವೀನತೆ ಮಾಡುವಿರಿ? ಅವ್ಯಕ್ತ ವರ್ಷದಲ್ಲಿ ತಮ್ಮ ಚಾರ್ಟನ್ನಿಟ್ಟಿದ್ದಿರಾ ಅಥವಾ ಕೆಲವೊಮ್ಮೆ ಇಟ್ಟು. ಕೆಲವೊಮ್ಮೆ ಇಟ್ಟಿರಲಿಲ್ಲವೇ? ಕೆಲವೊಮ್ಮೆಗೆ ಇಡುವವರೇ ಅಥವಾ ಸದಾಕಾಲದವರೇ? ಕೆಲವೊಮ್ಮೆಗಿರುವವರು ಹೆಚ್ಚಾಗಿದ್ದಾರೆ.

ಈ ಹೊಸವರ್ಷದಲ್ಲಿ ಹೊಸ ಚಾರ್ಟನ್ನಿಡಿ. ಏನಿಡುವಿರಿ? ನಾಲ್ಕೂ ವಿಷಯಗಳನ್ನಂತು ಬಹಳ ಚೆನ್ನಾಗಿ ತಿಳಿದುಕೊಂಡಿದ್ದೀರಿ. ಈ ವರ್ಷದಲ್ಲಿ ಇದೇ ಚಾರ್ಟನ್ನಿಡಿ- ನಾಲ್ಕೂ ವಿಷಯಗಳಲ್ಲಿ- ಜ್ಞಾನವಿರಬಹುದು ಅಥವಾ ಯೋಗದಲ್ಲಿ, ಧಾರಣೆಯಲ್ಲಿ, ಸೇವೆಯಲ್ಲಿ, ಪ್ರತಿಯೊಂದು ವಿಷಯದಲ್ಲಿ ಪ್ರತಿನಿತ್ಯವೂ ಏನಾದರೊಂದು ನವೀನತೆ ತರಬೇಕು. ಜ್ಞಾನ ಎಂದರೆ ಬುದ್ಧಿವಂತರಾಗುವುದು, ತಿಳುವಳಿಕೆ ಕೊಡುವುದು ಹಾಗೂ ಬುದ್ದಿವಂತರಾಗಿ ನಡೆಯುವುದು. ಜ್ಞಾನದಲ್ಲಿಯೂ ನವೀನತೆ ಅಂದರೆ ತನ್ನಲ್ಲಿ ಯಾವ ಕೊರತೆಯಿದೆಯೋ ಅದನ್ನು ಧಾರಣೆ ಮಾಡಿಕೊಂಡಾಗಲೇ ನವೀನತೆಯಾಗುತ್ತದೆ ಅಲ್ಲವೆ ಇಲ್ಲದಿರುವುದು ಇರುವಂತಾಯಿತೆಂದರೆ ನವೀನತೆಯಾಯಿತು. ಇದೇರೀತಿ ಯೋಗದ ಪ್ರಯೋಗದಲ್ಲಿ ಪ್ರತಿನಿತ್ಯ ಏನಾದರೊಂದು ಹೊಸದಾಗಿ ಅನುಭವ ಮಾಡಿರಿ. ಯೋಗದಲ್ಲಿ ಬಹಳ ಚೆನ್ನಾಗಿ ಕುಳಿತುಕೊಂಡಿದ್ದೀರಿ, ಬಹಳ ಚೆನ್ನಾಗಿ ಯೋಗವಾಯಿತು ಆದರೆ ನವೀನತೆ ಏನಾಯಿತು? ಶೇಕಡಾವಾರು ವೃದ್ಧಿಯಾಗುವುದೇ ನವೀನತೆಯಾಗಿದೆ. ಇಂದೇನಾದರೂ ತಮ್ಮ ಶೇಕಡಾವಾರು ಯೋಗದಲ್ಲಿ 50% ಇದೆ. ನಾಳೆ ಇದಕ್ಕಿಂತಲೂ ವೃದ್ಧಿಯಾಯಿತೆಂದರೆ ನವೀನತೆಯಾಯಿತು. ಇಡೀ ತಿಂಗಳಿನಲ್ಲಿ 50-50 ಆಗಬಾರದು. ನಾಲ್ಕೂ ವಿಷಯಗಳಲ್ಲಿ ತಮ್ಮ ಪ್ರಗತಿಯಲ್ಲಿ ನವೀನತೆ, ವಿಧಿಯಲ್ಲಿ ನವೀನತೆ. ಪ್ರಯೋಗದಲ್ಲಿ ನವೀನತೆ, ಅನ್ಯರನ್ನು ಸಹಜಯೋಗಿ ಮಾಡುವುದರಲ್ಲಿ ಹಾಗೂ ಶೇಕಡಾವಾರು ವೃದ್ಧಿಯಾಗುವುದರಲ್ಲಿ ನವೀನತೆ, ಯಾರಿಗೂ ದುಃಖ ಕೊಡಲಿಲ್ಲ, ಕ್ರೋಧ ಬರಲಿಲ್ಲ, ಎಂಬುದಂತೂ ಸಾಧಾರಣ ಚಾರ್ಟ್

ಆಯಿತು. ಇದನ್ನಂತೂ ತಮ್ಮ ರಾಯಲ್ ಪ್ರಜೆಗಳೂ ಮಾಡುತ್ತಾರೆ. ತಾವು ರಾಯಲ್ ಪ್ರಜೆಯಾಗಿದ್ದೀರಾ. ಅಥವಾ ರಾಜರೇ? ಹಾಗಾದರೆ ನವೀನತೆಯಿಂದ ಸ್ವತಹವಾಗಿಯೇ ತೀವ್ರಪುರುಷಾರ್ಥದ ಸಮೀಪತೆಯ ಅನುಭೂತಿಯಾಗುತ್ತಾ ಇರುತ್ತದೆ. ಚಾರ್ಟ್ ಏನಿಡಬೇಕು ಎಂದು ತಿಳಿಯಿತೆ? ಮತ್ತು ಪ್ರತಿನಿತ್ಯ ಕಳುಹಿಸಬಾರದು ಏಕೆಂದರೆ ಕೆಲಸ ಹೆಚ್ಚಾಗಿಬಿಡುತ್ತದೆ ಅದ್ದರಿಂದ ಮೂರು ತಿಂಗಳಿಗೊಮ್ಮೆ ಕಳುಹಿಸಿರಿ. ಈ ವರ್ಷದಲ್ಲಂತೂ ನೀವು ಉಳಿತಾಯವೂ ಮಾಡಬೇಕಲ್ಲವೆ. ಈ ವರ್ಷವು ವಿಶೇಷ ಉಳಿತಾಯದ ವರ್ಷವಾಗಿದೆ. ಒಬ್ಬರ ಹೆಸರಿನಲ್ಲಿ (ಏಕ್ ನಾಮಿ) ಹಾಗೂ ಏಕಾನಮಿ(ಉಳಿತಾಯ) ಮಾಡುವ ವರ್ಷವಾಗಿದೆ. ಜ್ಞಾನ ಸರೋವರದ ನಿರ್ಮಾಣ ಮಾಡುತ್ತಿದ್ದೀರಿ ಆದ್ದರಿಂದ ಎಲ್ಲದರಲ್ಲಿಯೂ ಉಳಿತಾಯ ಮಾಡಬೇಕು. ಎಲ್ಲಾ ಖಜಾನೆಗಳಲ್ಲಿ, ಸಮಯದಲ್ಲಿ, ಸಂಕಲ್ಪದಲ್ಲಿ, ಸಂಪತ್ತಿನಲ್ಲಿ, ಎಲ್ಲದರಲ್ಲಿಯೂ ಉಳಿತಾಯ ಮಾಡಿರಿ. ಇದಕ್ಕಾಗಿ ಪ್ರತೀ ಮೂರು ತಿಂಗಳಿನಲ್ಲಿ ತಮ್ಮನ್ನು ತಾವೇ ಸಾಕ್ಷಿಯಾಗಿದ್ದು ಚಾರ್ಟ್ ಪರಿಶೀಲನೆ ಮಾಡುತ್ತಾ ಚಿಕ್ಕದಾಗಿ ಸಮಾಚಾರ ಕೊಡಿ. ಪ್ರತೀ ಮೂರು ತಿಂಗಳಿನಲ್ಲಿ ನೋಡಿಕೊಳ್ಳಿರಿ- ಪ್ರಗತಿಯಾಗಿದೆಯೇ ಅಥವಾ ಹೇಗಿದ್ದಿರೋ ಹಾಗೆಯೇ ಇದ್ದೀರಾ? ಬೀಳುವ ಕಲೆಯಲ್ಲಂತು ಹೋಗಬಾರದು ಆದರೆ ಹೇಗಿದ್ದಿರೋ ಹಾಗೆಯೂ ಇರಬಾರದು. ಪುರುಷಾರ್ಥದಲ್ಲಿ ಮಧ್ಯಮದವರಾಗಬಾರದು. ನಾನಂತು ಬಯಸುತ್ತಿದ್ದೆನು ಆದರೆ ಏನು ಮಾಡುವುದು.... ಎಂದು ಹೇಳಬಾಗದು. ಏನೇನು ಹೇಳಬಾರದು. ನಾನು ಏನು ಮಾಡಲಿ, ಹೇಗೆ ಮಾಡಲಿ, ಹೀಗೆ ಮಾಡುವುದೇ.. ಇದು ಬ್ರಾಹ್ಮಣರ ಭಾಷೆಯಲ್ಲ. ಆದರೆ ಅನ್ಯರಿಗೂ ಹೀಗೆ ಮಾಡಿರಿ, ಹಾಗೆ ಮಾಡಿರಿ ಎಂದು ಸಹಯೋಗ ಕೊಡಿ. ಎಂತಹ ಚಾರ್ಟ್ ಇಡಬೇಕು? ಎನ್ನುವುದು ತಿಳಿಯಿತೇ. ಯಾರು- ಯಾರು ಏನೇನು ಮಾಡುತ್ತಾರೆ? ಎನ್ನುವುದನ್ನು ಈಗ ನೋಡುತ್ತೇವೆ.

ಬಾಪ್‌ದಾದಾರವರು ಸ್ನೇಹದ ಕಾರಣ ಹೆಸರನ್ನು ಅನೌನ್ಸ್ ಮಾಡುವುದಿಲ್ಲ. ಯಾರು ಏನೇನು ಮಾಡಿದರೆಂದು ಗೊತ್ತಿದೆಯಲ್ಲವೆ. ಇತ್ತೀಚೆಗೆ ಟಿ.ವಿ.ಯ ಫ್ಯಾಷನ್ ಇದೆ. ಬಾಪ್‌ದಾದಾರವರ ಬಳಿಯೂ ಟಿ.ವಿ.. ಇದೆ. ಬಾಪ್‌ದಾದಾರವರಿಗೆ ತಿಳಿದಿದೆ- ಹಿಂದಿನ ವರ್ಷದಲ್ಲಿ ಯಾವ ಕಾರ್ಯವನ್ನು ಕೊಡಲಾಗಿದೆ. ಅದನ್ನು ಯಾರೆಷ್ಟು ಮಾಡಿದರು? ಹಾಫ್ ಕಾಸ್ಟ್ ಎಷ್ಟಿದ್ದರು. ಫುಲ್ ಕಾಸ್ಟ್ ಎಷ್ಟಿದ್ದರು? ಎನ್ನುವುದನ್ನು ಅನೌನ್ಸ್ ಮಾಡುವುದೇ?

ಅಂದಮೇಲೆ ತಮಗಾಗಿಯೂ ಹಾಗೂ ಸರ್ವರಿಗಾಗಿಯೂ ಈ ವರ್ಷದಲ್ಲಿ ಮಹಾದಾನಿ-ವರದಾನಿ ಮೂರ್ತಿಯಾಗಿರಿ. ಹಾಗೆಯೇ ಪ್ರತಿನಿತ್ಯ ಏನಾದರೊಂದು ನವೀನತೆ ಅಂದರೆ ಅವಶ್ಯವಾಗಿ ಪ್ರಗತಿಯಿರಲಿ. ಇದು ಸ್ವಯಂನ ಪುರುಷಾರ್ಥದ ಬಗ್ಗೆ ತಿಳಿಸಲಾಯಿತು. ಸೇವೆಯಲ್ಲಿ ಏನು ಮಾಡುವಿರಿ? ಸೇವೆಯಲ್ಲಿಯೂ ನವೀನತೆ ತರಬೇಕಲ್ಲವೆ. ಮೇಳ ಮತ್ತು ಪ್ರದರ್ಶನಿಗಳನ್ನಂತೂ ಎಣಿಕೆಯಿಲ್ಲದಷ್ಟು ಮಾಡಿದ್ದೀರಿ. ಸಮ್ಮೇಳನ, ಸೆಮಿನಾರ್‌ಗಳೂ ಬಹಳಷ್ಟು ಮಾಡಿದಿರಿ. ಈಗ ಧ್ವನಿ ಮೊಳಗಿಸುವಂತಹ ಮೈಕ್ ಅತ್ಮರನ್ನು ತಯಾರು ಮಾಡಲೇಬೇಕು ಆದರೆ ಅದರ ವಿಧಿಯೇನಾಗಿದೆ? ಇದಕ್ಕೂ ಮೊದಲೇ ತಿಳಿಸಿದ್ದೇವೆ ಆದರೆ ಕಡಿಮೆ ಮಾಡಿದ್ದೀರಿ. ಸೇವೆಯ ಫಲಿತಾಂಶದಲ್ಲಿ ನೋಡಿದೆವು- ಬಹಳ ನಿಮಿತ್ತವಾಗಿರುವ ಆತ್ಮರನ್ನು ಸಮೀಪ ತರುವ ಮೊದಲು,  ನಾಯಕರು, ದೊಡ್ಡ ಇಂಡಸ್ಟ್ರಿಯಲಿಸ್ಟ್ ಆಗಿರಬಹುದು, ಅಥವಾ ದೊಡ್ಡ ಆಫೀಸರ್ ಆಗಿರಬಹುದು ಆದರೆ ಅವರನ್ನು ಸಮೀಪ ತರುವ ಸಾಧನವಾಗಿದೆ- ಅವರ ಸೆಕ್ರೆಟರಿಯನ್ನು ಬಹಳ ಚೆನ್ನಾಗಿ ಸಮೀಪಕ್ಕೆ ಕರೆತನಿರಿ. ತಾವುಗಳು ದೊಡ್ಡವರಿಗಾಗಿ ಸಮಯವನ್ನು ಕೊಡುತ್ತೀರಿ. ಅವರು ಒಳ್ಳೆಯದು- ಓಳ್ಳೆಯದು ಎಂದು ಹೇಳಿದ

ನಂತರ ಮಲಗಿಬಿಡುತ್ತಾರೆ. ಅವರನ್ನು ಪುನಃ ಜಾಗೃತಗೊಳಿಸುವುದಕ್ಕಾಗಿ ಇಷ್ಟು ಸಮಯವಂತು ಸಿಗುವುದಿಲ್ಲ. ಅವರೂ ಕೊಡುವುದಿಲ್ಲ, ತಾವೂ ಹೋಗುವುದಕ್ಕೆ ಆಗುವುದಿಲ್ಲ ಆದ್ದರಿಂದ ಯಾರು ಸೆಕ್ರೆಟರಿಯಾಗಿ ಇರುತ್ತಾರೆಯೋ ಅವರು ಬದಲಾಗುವುದೇ ಇಲ್ಲ. ಗಣ್ಯರಂತು ಬದಲಾಗಿಬಿಡುತ್ತಾರೆ. ಇಂದು ಒಬ್ಬ ಮಂತ್ರಿಯ ಸೇವೆ ಮಾಡುತ್ತೀರಿ, ಮತ್ತೆ ನಾಳೆ ಅವರು ಪ್ರಜೆಯಾಗಿಬಿಡುತ್ತಾರೆ. ಸೆಕ್ರೆಟರಿಯು ಬಹಳಷ್ಟು ಸಹಯೋಗಿ ಆಗಿರುತ್ತಾರೆ. ಆದ್ದರಿಂದ ಯಾವುದೇ ವರ್ಗದ ಸೇವೆಯಲ್ಲಿ, ಈ ವರ್ಷ ವಿಶೇಷವಾಗಿ ಸೆಕ್ರೆಟರಿ, ಮ್ಯಾನೇಜರ್ ಅಥವಾ ಪ್ರೈವೇಟ್ ಅಸಿಸ್ಟೆಂಟ್, ಯಾರೆಲ್ಲಾ ಶಕ್ತಿಶಾಲಿಯಾಗಿದ್ದಾರೆಯೋ ಗಣ್ಯರ ಸಮೀಪವಿದ್ದಾರೆಯೋ ಅವರ ಸೇವೆಯನ್ನು ವಿಶೇಷವಾಗಿ ಮಾಡಿರಿ.

ಇನ್ನೊಂದು ಮಾತು- ಇಷ್ಟಕ್ಕೆ ಮುಂಚೆಯೇ ಸೂಚನೆ ಕೊಟ್ಟಿದ್ದೇವೆ- ವರ್ತಮಾನ ಸಮಯ 'ಕಡಿಮೆ ಖರ್ಚಿನಲ್ಲಿ ಹೆಸರು ಪ್ರಸಿದ್ಧವಾಗಲಿ' ಅದರ ವಿಧಿಯಾಗಿದೆ- ಚಿಕ್ಕದು ಅಥವಾ ದೊಡ್ಡದಾಗಿರುವ ಯಾವುದೆಲ್ಲಾ ಸಂಸ್ಥೆ ಮತ್ತು ಅಸೋಸಿಯೇಷನ್‌ಗಳಿವೆಯೋ ಅವರೊಂದಿಗೆ ಸಂಬಂಧ-ಸಂಪರ್ಕವನ್ನು ಇಡಿ. ತಯಾರಿರುವ ವೇದಿಕೆಯಲ್ಲಿ ಹೆಸರು ಪ್ರಸಿದ್ಧ ಮಾಡಿರಿ. ಕಡಿಮೆ ಖರ್ಚಿನಲ್ಲಿ ಹೆಸರು ಪ್ರಸಿದ್ಧವಾಗಲಿ. ಮಾಡುತ್ತಿದ್ದೀರಿ ಆದರೆ ತೀವ್ರಗತಿಯಿಂದ ಮಾಡಿರಿ. ಪ್ರತಿಯೊಂದು ದೇಶದಲ್ಲಿ ಅಥವಾ ಪ್ರತಿಯೊಂದು ಹಳ್ಳಿಯಲ್ಲಿ ಅಥವಾ ಪ್ರತಿಯೊಂದು ಜಿಲ್ಲೆಯಲ್ಲಿ ಯಾವ ಅಸೋಸಿಯೇಷನ್‌ಗಳಿವೆಯೋ ಅಥವಾ ಬಹಳ ವರ್ಗಗಳ ಕಾರ್ಯವನ್ನು ಮಾಡುವವರಿದ್ದಾರೆ. ಸಮ್ಮೇಳನಗಳನ್ನು ಮಾಡುವವರಿದ್ದಾರೆ ಅಥವಾ ಮಾಡುತ್ತಾರೆಯೋ ಅಲ್ಲಿ ತಯಾರಿರುವ ವೇದಿಕೆಯಲ್ಲಿ ಸಂದೇಶ ಕೊಡಿ. ಅದರಿಂದ 'ಸಮಯ ಹಾಗೂ ಪರಿಶ್ರಮ ಎರಡು ಉಳಿತಾಯವಾಗುತ್ತದೆ. ಈಗ ಇದನ್ನು ತೀವ್ರಗತಿಯಿಂದ ಮಾಡಿರಿ. ಯಾವ ದೇಶದ ಅಥವಾ ಯಾವ ಸ್ಥಾನದಲ್ಲಿ ನಿಮಿತ್ತರಾಗಿದ್ದೀರೋ ಆ ಸ್ಥಾನದ ಯಾವುದೇ ಸಂಸ್ಥೆಯೂ ವಂಚಿತರಾಗಿಬಿಡಬಾರದು ಎನ್ನುವುದು ಪರಿಶೀಲನೆ ಮಾಡಿರಿ. ಏಕೆಂದರೆ ವರ್ತಮಾನ ಸಮಯದಲ್ಲಿ ವಾಯುಮಂಡಲದ ಪರಿವರ್ತನೆ ಆಗಿಬಿಟ್ಟಿದೆ. ಈಗ ಭಯ ಕಡಿಮೆಯಿದೆ. ಸ್ನೇಹವು ಹೆಚ್ಚಾಗಿದೆ. ಒಳ್ಳೆಯದು ಚೆನ್ನಾಗಿದೆ ಎಂದು ಒಪ್ಪಿಕೊಳ್ಳುತ್ತಾರೆ. ಒಳ್ಳೆಯವರಾಗುವುದಿಲ್ಲ ಆದರೆ ಒಳ್ಳೆಯದೆಂದು ಒಪ್ಪುತ್ತಾರೆ ಆದ್ದರಿಂದ ಈ ಎರಡೂ ಪ್ರಕಾರದ ಸೇವೆಯಲ್ಲಿ ಒತ್ತು ಕೊಟ್ಟಾಗ ಸಹಜವಾಗಿ ನಾಯಕರು ತಯಾರಾಗಿಬಿಡುತ್ತಾರೆ. ಹೊಸ ವರ್ಷವನ್ನು ಪ್ರಾರಂಭಿಸಿದಾಗ ಹೊಸ ವಿಧಿ ಹಾಗೂ ವಿಧಾನವೂ ಇರಬೇಕಲ್ಲವೆ.

ಈ ಹೊಸ ವರ್ಷದ ಅಮೃತವೇಳೆಯಲ್ಲಿ ಸದಾ ಈ ಸ್ಲೋಗನ್ನನ್ನು ಇಮರ್ಜ್ ಮಾಡಿಟ್ಟುಕೊಳ್ಳಿರಿ- ಸದಾ ಉತ್ಸಾಹ ಉಲ್ಲಾಸದಲ್ಲಿ ಹಾರಬೇಕು ಹಾಗೂ ಅನ್ಯರನ್ನೂ ಹಾರಿಸುತ್ತಿರಬೇಕು. ಮಧ್ಯ-ಮಧ್ಯದಲ್ಲಿ ಇದರ ಪರಿಶೀಲನೆ ಮಾಡಬೇಕು. ಅದನ್ನು ಅಮೃತವೇಳೆ ಪರಿಶೀಲನೆ ಮಾಡಿದ ನಂತರ ಇಡೀ ದಿನದಲ್ಲಿ ಮರ್ಜ್ ಮಾಡಿಬಿಡುವಂತೆ ಆಗಬಾರದು. ನಂತರ ರಾತ್ರಿಯಲ್ಲಿಯ ಚಿಂತನೆ ಮಾಡಿದಿರಿ- ಇಂದಿನ ದಿನವಂತೂ ಹೀಗೆಯೇ ಇದ್ದಿತೆ ಎನ್ನುವಂತಿಲ್ಲ, ಮಧ್ಯ-ಮಧ್ಯದಲ್ಲಿ ಪರಿಶೀಲನೆ ಮಾಡಿರಿ. ಇಮರ್ಜ್ ಮಾಡಿಕೊಳ್ಳಿರಿ- ಉತ್ಸಾಹ ಉಲ್ಲಾಸಕ್ಕೆ ಬದಲಾಗಿ ಬೇರೆ ಯಾವುದೋ ಮಾರ್ಗದಲ್ಲಂತು ಹೊರಟುಹೋಗಲಿಲ್ಲವೇ? ಹಾರುವ ಕಲೆಗೆ ಬದಲಾಗಿ ಮತ್ತಾವುದೋ ಕಲೆಯು ತನ್ನಕಡೆ ಸೆಳೆಯಲಿಲ್ಲವೇ? ಎಂದು. ಒಳ್ಳೆಯದು-

**ನಾಲ್ಕೂ ಕಡೆಯಲ್ಲಿರುವ ನವ ಜೀವನದ ಅನುಭವ ಮಾಡುವಂತಹ ಸರ್ವ ಬ್ರಾಹ್ಮಣ ಮಕ್ಕಳಿಗೆ, ಸದಾ ನವ ಯುಗದ ಆಧಾರಮೂರ್ತಿ ಶ್ರೇಷ್ಠಾತ್ಮರಿಗೆ, ಸದಾ ಸಂಕಲ್ಪ-ವಚನ ಹಾಗೂ ಕರ್ಮದ ಮೂಲಕ ಮಹಾದಾನಿ-ವರದಾನಿ ಅತ್ಮರಿಗೆ, ಸದಾ ತಮ್ಮ ಸ್ಥಿತಿಯ ಮೂಲಕ ಅನ್ಯರ ಪರಿಸ್ಥಿತಿಯನ್ನೂ ಸಹಜಗೊಳಿಸುವಂತಹ ಸಮರ್ಥ ಆತ್ಮರಿಗೆ, ಸದಾ ಪ್ರತಿನಿತ್ಯವೂ ತಮ್ಮಲ್ಲಿ ಪ್ರಗತಿ ಅರ್ಥಾತ್ ನವೀನತೆಯ ಅನುಭವ ಮಾಡುವಂತಹ ಸಮೀಪ ಆತ್ಮರಿಗೆ, ಸದಾ ಏಕ್ ನಾಮಿ ಹಾಗೂ ಎಕಾನಮಿ ಮಾಡುವಂತಹ ತಂದೆಯ ಸಮಾನ ಸಮೀಪ ಆತ್ಮರಿಗೆ, ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 31-12-1993

***ಹೊಸ ವರ್ಷದಲ್ಲಿ ಸದಾ ಉತ್ಸಾಹ ಉಲ್ಲಾಸದಲ್ಲಿ ಹಾರುತ್ತಾ ಇರಬೇಕು ಹಾಗೂ ಸರ್ವರ ಪ್ರತಿ ಮಹಾದಾನಿ ವರದಾನಿಯಾಗಿದ್ದು ವ್ಯರ್ಥವನ್ನು ಸಮಾಪ್ತಿ ಮಾಡಬೇಕು.***

ತಮ್ಮ ಸಂಬಂಧ ಸಂಪರ್ಕದಲ್ಲಿ ಯಾರೆಲ್ಲರೂ ಬರುತ್ತಾರೆಯೋ ಅವರಿಗೆ ಮಹಾದಾನಿಯಾಗಿ ಯಾವುದಾದರೂ ಒಂದು ಶಕ್ತಿಯ, ಜ್ಞಾನದ, ಗುಣದ ದಾನ ಮಾಡಲೇಬೇಕು. ಮೂರು ಖಜಾನೆಗಳು ಇಷ್ಟು ಸಂಪನ್ನವಾಗಿವೆಯೇ ಅಥವಾ ಒಂದರಲ್ಲಿ ಸಂಪನ್ನವಾಗಿ ಇನ್ನೊಂದರಲ್ಲಿ ಆಗಿಲ್ಲವೇ? ವರ್ತಮಾನ ಸಮಯದಲ್ಲಿ ವಿಶ್ವಾತ್ಮರಿಗೆ ಈ ಮೂರರ ಅವಶ್ಯಕತೆಯೂ ಬಹಳಷ್ಟು ಇದೆ ಮಹಾದಾನಿ ಆತ್ಮರ ಒಂದು ದಿನವೂ ಕೊಡದೆ ಇರುವುದಿಲ್ಲ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನವಯುಗಕ್ಕೆ ಆಧಾರ ಮೂರ್ತಿ.

2. ನಾನು ಸಂಗಮ ಯುಗದಲ್ಲಿಯೇ ಹೊಸ ಬ್ರಾಹ್ಮಣ ಜೀವನ ಮತ್ತು ಹೊಸ ಬ್ರಾಹ್ಮಣ ಪ್ರಪಂಚವನ್ನು ಅನುಭವ ಮಾಡುತ್ತಿದ್ದೇನೆ.

3. ನಾನು ದಿನವಿಡೀ ಹೊಸ ಹಾಡು, ಹೊಸ ರೀತಿ, ಹೊಸ ಸ್ಮೃತಿ, ಹೊಸ ವೃತ್ತಿ, ಹೊಸ ದೃಷ್ಟಿ ಯನ್ನು ಅನುಭವ ಮಾಡುತ್ತಿದ್ದೇನೆ.

4. ನಾನು ಉತ್ಸಾಹ ಉಲ್ಲಾಸಗಳಲ್ಲಿದ್ದು ಪ್ರತಿದಿನ ಉತ್ಸವವನ್ನು ಆಚರಿಸಿಕೊಂಡಿದೇನೆ.

5. ನಾನು ಉತ್ಸಾಹ ಉಲ್ಲಾಸ ಗಳೆಂಬ ರೆಕ್ಕೆಗಳಿಂದ ಪ್ರತಿದಿನವೂ ಹಾರುವ ಕಲೆಯಲ್ಲಿದ್ದೇನೆ.

6. ನಾನು ಉತ್ಸಾಹ ಉಲ್ಲಾಸಗಳಿಂದ ಪ್ರತಿಯೊಂದು ಕಷ್ಟವನ್ನು ಸಹಜವಾಗಿ, ಬಿರುಗಾಳಿಯನ್ನು ಬಳುವಳಿಯಾಗಿ, ಪರ್ವತವನ್ನು ಸಾಸಿವೆಯನ್ನಾಗಿ, ಸಾಸಿವೆಯನ್ನು ಹತ್ತಿಯನ್ನಾಗಿ ಅನುಭವ ಮಾಡಿಕೊಂಡಿದ್ದೇನೆ.

7. ನಾನು ವಿಶ್ವದ ಆಧಾರ ಮೂರ್ತಿಯಾಗಿ ನಾವೇ ಇದ್ದೆವು, ಈಗಲೂ ನಾವೇ ಇದ್ದೇವೆ ಹಾಗೂ ಅನೇಕ ಬಾರಿ ನಾವೇ ಆಗುತ್ತೇವೆ ಎಂಬ ಅವಿನಾಶಿ ಉತ್ಸಾಹ ಉಲ್ಲಾಸಗಳಲ್ಲಿ ನಿಶ್ಚಯದಿಂದ ಇರುವ ನಂಬರ್ ಒನ್ ವಿದ್ಯಾರ್ಥಿ.

8. ನಾನು ನನ್ನ ಶ್ರೇಷ್ಠ ವೃತ್ತಿಯಿಂದ ವಿಶ್ವದ ವಾತಾವರಣವನ್ನು ಪರಿವರ್ತನೆ ಮಾಡುವ, ಪವಿತ್ರ ದೃಷ್ಟಿಯಿಂದ ವಿಶ್ವದ ಆತ್ಮರನ್ನು ಹಾಗೂ ಪ್ರಕೃತಿಯನ್ನು ಪವಿತ್ರವನ್ನಾಗಿ ಮಾಡುವ, ನನ್ನ ದೃಷ್ಟಿಯಿಂದ ಸೃಷ್ಟಿಯನ್ನು ಬದಲಾವಣೆ ಮಾಡುವ, ನನ್ನ ಶ್ರೇಷ್ಠ ಕರ್ಮಗಳಿಂದ ಶ್ರೇಷ್ಠಾಚಾರಿ ಪ್ರಪಂಚವನ್ನು ತಯಾರು ಮಾಡುವ ವಿಶ್ವದ ಸರ್ವಾತ್ಮರ ಆಧಾರ ಮೂರ್ತಿ ಆಗಿದ್ದೇನೆ.

9. ನಾನು ಸದಾ ವಿಶ್ವದ ಜವಾಬ್ದಾರಿ ಕಿರೀಟವನ್ನು ಧರಿಸಿ ಹಗುರವಾಗಿ ಅನುಭವ ಮಾಡಿರುವ ಡಬಲ್ ಲೈಟ್ ಸ್ವರೂಪ.

10. ನಾನು ಅವ್ಯಕ್ತ ಫರಿಶ್ತಾ.

11. ನಾನು ಶಕ್ತಿಯ ಖಜಾನೆ, ಜ್ಞಾನದ ಖಜಾನೆ, ಗುಣದ ಖಜಾನೆಯಿಂದ ಸಂಪನ್ನವಾಗಿ, ಸಂಬಂಧ ಸಂಪರ್ಕದಲ್ಲಿ ಬರುವ ಪ್ರತಿಯೊಬ್ಬರಿಗೂ ಮಹಾದಾನಿಯಾಗಿ ಶಕ್ತಿಯ, ಜ್ಞಾನದ, ಗುಣದ ದಾನ(ಸಹಯೋಗ)ವನ್ನು ಕೊಡುವ ವರದಾನಿ, ಸಂಪೂರ್ಣ ಸಂಪನ್ನ ಸ್ವರೂಪ.

12. ನನ್ನ ಸಂಬಂಧ ಸಂಪರ್ಕದಲ್ಲಿ ಭಲೇ ಗ್ಲಾನಿ ಮಾಡುವ ಅಥವಾ ನಿಂದನೆ ಮಾಡುವವರೇ ಬಂದರೂ ನನ್ನ ಶುಭ ಭಾವನೆ, ಶುಭಕಾಮನೆಯ ಮೂಲಕ, ವೃತ್ತಿ, ಸ್ಥಿತಿಯ ಮೂಲಕ ಗುಣದಾನ, ಸಹನಶೀಲತೆಯ ಶಕ್ತಿಯ, ದಯೆಯ, ಶೀತಲತೆಯ ಜಲದ ಮೂಲಕ ವರದಾನವನ್ನು ಕೊಡುವ ವರದಾನಿ.

13. ನಾನು ಮಹಾದಾನಿ ವರದಾನಿಯಾಗುವ ಸಂಸ್ಕಾರವನ್ನು ಈಗ ಚೈತನ್ಯದಲ್ಲಿ ತುಂಬಿಕೊಂಡು ಭವಿಷ್ಯ ಜಡ ಚಿತ್ರದ ಮೂಲಕವೂ ವರದಾನಿ ಮೂರ್ತಿ ಆಗಿದ್ದೇನೆ.

14. ನಾನು ಮಹಾದಾನಿ ವರದಾನಿಯಾಗಿ ವ್ಯರ್ಥವನ್ನು ಸ್ವತಹವಾಗಿ ಸಮಾಪ್ತಿ ಮಾಡಿರುವ ಸಮರ್ಥ ಸ್ವರೂಪ.

15. ನಾನು ಜ್ಞಾನ, ಯೋಗ, ಧಾರಣೆ, ಸೇವೆ ಎಂಬ ನಾಲ್ಕು ಸಬ್ಜೆಕ್ಟ್ ಗಳಲ್ಲಿ ಯಾವುದೋ ಒಂದು ನವೀನತೆಯನ್ನು ತಂದಿದ್ದೇನೆ.

16. ನಾನು ಸ್ವ ಪ್ರಗತಿಯಲ್ಲಿ, ವಿಧಿಯಲ್ಲಿ, ಪ್ರಯೋಗದಲ್ಲಿ, ಅನ್ಯರನ್ನು ಸಹಜಯೋಗಿಯಾಗಿ ಮಾಡುವುದರಲ್ಲಿ, ಶೇಕಡಾವಾರು ವೃದ್ಧಿಯಾಗುವುದರಲ್ಲಿ, ನವೀನತೆಯನ್ನು ತಂದಿರುವ ತೀವ್ರಪುರುಷಾರ್ಥಿ.

17. ನಾನು ಸ್ವಯಂ ಸಾಕ್ಷಿಯಾಗಿ ನನ್ನ ಚಾರ್ಟನ್ನು ಪರಿಶೀಲಿಸಿಕೊಳ್ಳುತ್ತಿದ್ದೇನೆ.

18. ನಾನು ಕಡಿಮೆ ಖರ್ಚು ಹೆಚ್ಚು ಸಫಲತೆ ಬರುವ ಸೇವೆಯನ್ನು ಮಾಡುತ್ತಿದ್ದೇನೆ.

19. ನಾನು ದಿನವಿಡೀ ಉತ್ಸಾಹ ಉಲ್ಲಾಸಗಳಲ್ಲಿ ಇದ್ದೇನೆಯೇ ಎಂದು ಮಧ್ಯಮಧ್ಯದಲ್ಲಿ ಪರಿಶೀಲನೆ ಮಾಡಿಕೊಂಡು ಸರಿಪಡಿಸಿದ್ದೇನೆ.